ಮೈಸೂರು ವಿಶ್ವವಿದ್ಯಾನಿಲಯ

Estd-1916

(Re-accredited by NAAC with CGPA 3.47 on four point scale with A grade)

ಸಂಖ್ಯೆ:ಪ.ವಿ.8.4/ಯು.ಜಿ/59/2011-12

ಕುಲಸಚಿವ (ಪರೀಕ್ಷಾಂಗ) ರವರ ಕಾರ್ಯಾಲಯ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570 005.
ದಿನಾಂಕ : 14-07-2022

ಗೆ,

ಪ್ರಾಂಶುಪಾಲರು,
ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಒಳಪಡುವ
ಎಲ್ಲಾ ಪದವಿ ಕಾಲೇಜುಗಳು.

ಮಾನ್ಯರೆ,

ವಿಷಯ: ಅಧ್ಯಾಪಕರ ಜೇಷ್ಠತಾ ಪಟ್ಟಿ (Gradation List) ಯನ್ನು Update ಮಾಡಲು ಅಧ್ಯಾಪಕರ ಸೇವಾ ಹಿರಿತನದ ವಿವರಗಳನ್ನು ಕಳುಹಿಸುವ ಬಗೆಗೆ.

***~~***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **2022-23ನೇ** ಸಾಲಿನ ಪರೀಕ್ಷಾ ಮಂಡಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಲು ಹಾಗೂ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಸಂಬಂಧ ಅಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಿಮ್ಮ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಮಾಹಿತಿಯು ನಮ್ಮಲ್ಲಿ ಲಭ್ಯವಿದ್ದು, **ಖಾಯಂ ಅಧ್ಯಾಪಕರುಗಳು (ಯುಜಿಸಿ) / ಆಡಳಿತ ಮಂಡಳಿ ಖಾಯಂ ಅಧ್ಯಾಪಕರುಗಳು (ನಾನ್ ಯುಜಿಸಿ) ಹೊಸದಾಗಿ ತಮ್ಮ ಕಾಲೇಜಿಗೆ ಸೇರ್ಪಡೆ ಆಗಿದ್ದಲ್ಲಿ (03 ಮೂರು ವರ್ಷಕ್ಕಿಂತ ಮೇಲ್ಪಟ್ಟು ಸೇವಾನುಭವ ಹೊಂದಿದ್ದಲ್ಲಿ ಮಾತ್ರ) ಹಾಗೂ ನಿಮ್ಮ ಕಾಲೇಜನ್ನು ಬಿಟ್ಟ ಅಧ್ಯಾಪಕರುಗಳು / ವಯೋನಿವೃತ್ತಿ ಹೊಂದಿದ ಅಧ್ಯಾಪಕರುಗಳು / ಸೇವೆಯಲ್ಲಿರುವಾಗಲೇ ಮರಣ ಹೊಂದಿದ ಅಧ್ಯಾಪಕರುಗಳ ವಿವರಗಳನ್ನು ಮಾತ್ರ ಈ ಪತ್ರದೊಡನೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ** ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ.

ಕೆಲವು ಕಾಲೇಜುಗಳ ಮುಖ್ಯಸ್ಥರು ಅಧ್ಯಾಪಕರ ಸೇವಾ ವಿವರಗಳನ್ನು ಸರಿಯಾಗಿ ಕಳುಹಿಸದೆ ಮೌಲ್ಯಮಾಪನದ ಸಮಯದಲ್ಲಿ ಗೊಂದಲ ಉಂಟಾಗಿ ಕೆಲವು ಅಧ್ಯಾಪಕರು ಪರೀಕ್ಷಾ ಕಾರ್ಯದಿಂದ ವಂಚಿತರಾಗುತ್ತಿದ್ದಾರೆ. ಈ ರೀತಿ ಅಧ್ಯಾಪಕರ ಸೇವಾ ಅವಧಿಯನ್ನು ಸಮರ್ಪಕವಾಗಿ ನಮೂದಿಸದೇ ಇದ್ದಂತಹ ಪ್ರಕರಣಗಳಲ್ಲಿ ಅವರ ಸೇವಾ ಹಿರಿತನಕ್ಕೆ ಚ್ಯುತಿ ಉಂಟಾಗುವ ಸಂಭವವು ಸಹ ಇರುತ್ತದೆ. ಅಲ್ಲದೆ, ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರ ಹೆಸರನ್ನು ಕಳುಹಿಸುವಾಗ ಉದ್ದೇಶಪೂರ್ವಕವಾಗಿಯೇ ಕೆಲವು ಅಧ್ಯಾಪಕರುಗಳ ಹೆಸರುಗಳನ್ನು ಕೈಬಿಡಲಾಗುತ್ತಿದೆ ಎಂಬ ದೂರುಗಳು ಸಹ ವಿಶ್ವವಿದ್ಯಾನಿಲಯಕ್ಕೆ ಕೇಳಿಬರುತ್ತಿದೆ. ಆದುದರಿಂದ, ಅಧ್ಯಾಪಕರುಗಳ ಖಾಯಂಗೊಂಡ ದಿನಾಂಕವನ್ನು ಸೇವಾಪುಸ್ತಕದಲ್ಲಿ ಪರಿಶೀಲಿಸಿ ಸೇವಾ ವಿವರಗಳನ್ನು ಪ್ರಾಂಶುಪಾಲರು ಕಡ್ಡಾಯವಾಗಿ ದೃಡೀಕರಿಸಿ **ದಿನಾಂಕ 30-07-2022ರೊಳಗೆ** ಈ ಕಛೇರಿಗೆ ಕಳುಹಿಸುವಂತೆ ಸೂಚಿಸಲಾಗಿದೆ (**ಖಾಯಂ ಅಧ್ಯಾಪಕರುಗಳು ಖಾಯಂ ಪೂರ್ವದಲ್ಲಿ ನಿರ್ವಹಿಸಿದ ತಾತ್ಕಾಲಿಕ ಸೇವೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ**) ಅಧ್ಯಾಪಕರುಗಳ ಹೆಸರುಗಳನ್ನು ಕಳುಹಿಸುವಾಗ ಯಾವುದೇ ಅಧ್ಯಾಪಕರ ಹೆಸರನ್ನು ಕೈಬಿಟ್ಟಲ್ಲಿ ಅಥವಾ ಕೊಟ್ಟ ಮಾಹಿತಿ ತಪ್ಪಾಗಿದ್ದಲ್ಲಿ ಅಥವಾ ವಿವರಗಳು ಅಪೂರ್ಣವಾಗಿದ್ದಲ್ಲಿ ಅಥವಾ ನಿಗದಿತ ದಿನಾಂಕದ ಒಳಗೆ ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ತಲುಪದಿದ್ದಲ್ಲಿ ಇದಕ್ಕೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತಾರೆ.

ಮೌಲ್ಯಮಾಪನ ಮತ್ತು ಇತರೆ ಪರೀಕ್ಷಾ ಕಾರ್ಯಗಳನ್ನು ಸುಗಮವಾಗಿ ನಡೆಸಲು ವಿವರಗಳು ತುಂಬಾ ಅವಶ್ಯಕವಾಗಿರುವುದರಿಂದ, ವಿವರಗಳನ್ನು ಕಳುಹಿಸಲು ಅಧ್ಯತೆ ನೀಡಬೇಕೆಂದು ಕೋರಲಾಗಿದೆ.

Gnana 14/7/22

**ಕುಲಸಚಿವ (ಪರೀಕ್ಷಾಂಗ)**

ಪ್ರತಿ:

1. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವ(ಪರೀಕ್ಷಾಂಗ) ಅವರುಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

E:8.4/Kannada Letters/Ja

# ನಮೂನೆ

## ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಸೇವಾ ಹಿರಿತನದ ವಿವರಗಳು

ಕಾಲೇಜಿನ ಹೆಸರು ........................................................ ಕಾಲೇಜಿನ ಕೋಡ್ ನಂ .................................. ದೂರವಾಣಿ ಸಂಖ್ಯೆ.................................

| ಕ್ರ.ಸಂ. | ಅಧ್ಯಾಪಕರ ಹೆಸರು | ಹುದ್ದೆ ಮತ್ತು ಬೋಧನಾ ವಿಷಯ | ಜನ್ಮ ದಿನಾಂಕ | ಖಾಯಂ ಉದ್ಯೋಗಕ್ಕೆ ಸೇರಿದ ದಿನಾಂಕ (ದಿನಾಂಕ:ತಿಂಗಳು: ವರ್ಷ) ಕಡ್ಡಾಯವಾಗಿ ನಮೂದಿಸತಕ್ಕದ್ದು | ಯು.ಜಿ.ಸಿ ವೇತನ ಪಡೆಯುತ್ತಿ-ದ್ದಾರೆಯೇ (ಹೌದು/ ಇಲ್ಲ) | ಬೋಧನೆ ಮಾಡುತ್ತಿರುವ ವಿಷಯದ ಕೋಡ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು | ವಿ.ವಿ.ಪರೀಕ್ಷಾ ಕಾರ್ಯದಲ್ಲಿ ಲೋಪವೆಸಗಿದ್ದರೆ ಅದರ ವಿವರ | ಅಧ್ಯಾಪಕರ ಮೂಲ ವೇತನ ಹಾಗೂ ಇತರೆ ಭತ್ಯೆ | ಮೊಬೈಲ್ ಸಂಖ್ಯೆ/ ಇ-ಮೇಲ್ ವಿಳಾಸ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |

ಪ್ರಾಂಶುಪಾಲರ ಸಹಿ
ಮತ್ತು ಕಾಲೇಜಿನ ಮೊಹರು

ಸ್ಥಳ:
ದಿನಾಂಕ:

**ಸೂಚನೆ:**

1. ಪ್ರತಿ ಪದವಿಗೆ (ಬಿ.ಎ, ಬಿ.ಎಸ್ಸಿ, ಬಿ.ಕಾಂ, ಬಿ.ಬಿ.ಎಂ ಇತ್ಯಾದಿ) ಪ್ರತ್ಯೇಕ ಸೇವಾ ಹಿರಿತನದ ವಿವರಗಳನ್ನು ಸಿದ್ಧಪಡಿಸಿ ಕಳುಹಿಸುವುದು.
2. ಒಬ್ಬರೆ ಅಧ್ಯಾಪಕರು ಬಿ.ಕಾಂ ಮತ್ತು ಬಿ.ಬಿ.ಎಂ ಎರಡನ್ನು ಬೋಧನೆ ಮಾಡುತ್ತಿದ್ದರೆ ಯಾವುದಾದರು ಒಂದು ಕಡೆ ಮಾತ್ರ ಅವರ ಹೆಸರನ್ನು ಸೇರಿಸುವುದು.